# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **626(747)**
2. ಸದಸ್ಯರ ಹೆಸರು : **ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
3. ಉತ್ತರಿಸಬೇಕಾದ ಸಚಿವರು : **ಗೃಹ ಸಚಿವರು**
4. ಉತ್ತರಿಸುವ ದಿನಾಂಕ :

<table>
<tr><th>ಕ್ರ ಸಂ.</th><th>ವಿಷಯ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಅಕ್ರಮವಾಗಿ ನಕಲಿ ವೋಟರ್‌ಐಡಿ, ಆಧಾರ್‌ಕಾರ್ಡ್, ಜನನ ಪ್ರಮಾಣ ಪತ್ರಗಳನ್ನು ತಯಾರಿಸಿ ಬಾಂಗ್ಲಾದೇಶದ ನಾಗರೀಕರಿಗೆ ಮಾರಾಟ ಮಾಡುತ್ತಿರುವ ಡಿಜಿಟಲ್ ಅಡ್ಡೆಗಳ ಹಾವಳಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ರಾಜ್ಯದಲ್ಲಿ ಯಾವುದೇ ಅಕ್ರಮ ಡಿಜಿಟಲ್ ಅಡ್ಡೆಗಳು ಇರುವುದು ಅಥವಾ ಹೆಚ್ಚಾಗಿರುವುದು ಕಂಡುಬಂದಿರುವುದಿಲ್ಲ.</td></tr>
<tr><td>ಆ)</td><td>ಬಂದಿದಲ್ಲಿ, ಈವರೆಗೆ ಎಷ್ಟು ನಕಲಿ ಡಿಜಿಟಲ್ ಅಡ್ಡೆಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)</td></tr>
<tr><td>ಇ)</td><td>ಬೆಳಗಾವಿ ಜಿಲ್ಲೆಯ ಗಡಿ ಭಾಗಗಳಲ್ಲಿ ಕಾನೂನು ಬಾಹಿರವಾಗಿ ನಕಲಿ ಸರ್ಕಾರಿ ದಾಖಲೆಗಳನ್ನು ವಿತರಿಸುತ್ತಿರುವ ಯಾವ ಯಾವ ಡಿಜಿಟಲ್ ಅಡ್ಡೆಗಳನ್ನು ಗುರುತಿಸಲಾಗಿದೆ; ಅವುಗಳ ವಿರುದ್ಧ ಏನೇನು ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ;</td><td rowspan="2">ಪ್ರಸ್ತುತ ಬೆಳಗಾವಿ ಜಿಲ್ಲೆಯಲ್ಲಿ ಅಂತಹ ಯಾವುದೇ ಡಿಜಿಟಲ್ ಅಡ್ಡೆಗಳು ಇರುವುದಿಲ್ಲ.</td></tr>
<tr><td>ಈ)</td><td>ಈವರೆಗೆ ಎಷ್ಟು ಪ್ರಮಾಣ ನಕಲಿ ಸರ್ಕಾರಿ ದಾಖಲೆಗಳನ್ನು ವಿತರಿಸಲಾಗಿದೆ;</td></tr>
<tr><td>ಉ)</td><td>ಬೆಳಗಾವಿ ಗಡಿ ಪ್ರದೇಶದಿಂದ ಈವರೆಗೆ ಎಷ್ಟು ಮಂದಿ ಅಕ್ರಮ ಬಾಂಗ್ಲಾ ವಲಸಿಗರನ್ನು ಗಡಿಪಾರು ಮಾಡಲಾಗಿದೆ; ಎಷ್ಟು ಪ್ರಮಾಣದ ನಕಲಿ ಸರ್ಕಾರಿ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ? (ವಿವರ ನೀಡುವುದು)</td><td>ಬೆಳಗಾವಿ ಗಡಿ ಪ್ರದೇಶದಿಂದ ಈವರೆಗೆ ಒಟ್ಟು 12 ಬಾಂಗ್ಲಾ ಅಕ್ರಮ ವಲಸಿಗರನ್ನು ಗಡಿಪಾರು ಮಾಡಲಾಗಿದ್ದು, ಸದರಿಯವರುಗಳಿಂದ ಭಾರತೀಯ ಪಾಸ್‌ಪೋರ್ಟ್, ಆಧಾರ್‌ಕಾರ್ಡ್, ಪ್ಯಾನ್‌ಕಾರ್ಡ್, ಜನನ ಪ್ರಮಾಣ ಪತ್ರ, ಪಡಿತರಚೀಟಿ ಹಾಗೂ ಚುನಾವಣಾ ಗುರುತಿನ ಚೀಟಿಯಂತಹ ಸರ್ಕಾರಿ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.</td></tr>
</table>

**ಸಂಖ್ಯೆ: ಹೆಚ್‌ಡಿ 136 ಪಿಎಂಎಸ್ 2019**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು.